**<u>ಅಸಲು ದಾವೆ ನಂ. 207/2022  PW-1</u>**

**<u>ದಿನಾಂಕ: 18.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿಯರ ಪರ ಶ್ರೀ. ಐ ಎಂ ಕೆ ವಕೀಲರಿಂದ</u>

ನಿಪಿ-2 ಮತ್ತು 8 ರ ಆಧಾರದಲ್ಲಿ ನನ್ನ ಅಜ್ಜಿ ಖೈರುನ್ನಿಸಾ ಇವಳ ಹೆಸರು ದಾವಾ ಆಸ್ತಿಯಲ್ಲಿ ಹಿಸ್ಸೆ ಇದೇ ಅಂತಾ ಠರಾಯಿಸಿ ದಾವಾ ಆಸ್ತಿ ಪಹಣಿಯಲ್ಲಿ ಹೆಸರು ಏರಿತು. ಅದೇ ರೀತಿಯಲ್ಲಿ ಖತೇಜಾಬಿ ಮತ್ತು ಬುಡನಸಾಬ ಇವರ ಹೆಸರು ಕೂಡಾ ದಾವಾ ಆಸ್ತಿಯಲ್ಲಿ ಹಿಸ್ಸೆ ಇದೇ ಅಂತಾ ಠರಾಯಿಸಿ ದಾವಾ ಆಸ್ತಿ ಪಹಣಿಯಲ್ಲಿ ಹೆಸರು ಏರಿತು ಎಂದರೆ ಸರಿಯಲ್ಲ. 3 ಜನರ ಪರವಾಗಿ ಡ ಎಂಟ್ರಿಯಾಗಿ ಅವರ ಹೆಸರುಗಳು ಆರ್ ಟಿ ಸಿ ಪಹಣಿಯಲ್ಲಿ ಏರಿದ್ದರೂ ಕೂಡಾ ಏರಿಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಡ ಪಹಣಿಯನ್ನು ನಾನಾಗಲೀ ಅಥವಾ ನನ್ನ ಪೂರ್ವಜರಾಗಲೀ ಇಲ್ಲಿಯವರೆಗೂ ಯಾವುದೇ ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ನಿಜ. ಸದರಿ ಡ ಪಹಣಿಯ ಪ್ರಕಾರ ನನ್ನ ಅಜ್ಜಿ ಖೈರುನ್ನಿಸಾ, ಖತೇಜಾಬಿ ಮತ್ತು ಬುಡನಸಾಬ ಮೂವರಿಗೂ ತಲಾ 1/3 ಹಿಸ್ಸೆ ಇದೆ ಎಂದರೆ ಸರಿಯಲ್ಲ.

ದಾವೆಗೆ ಮಾಹಿತಿಯನ್ನು ನಾನು ಮತ್ತು 1 ನೇ ವಾದಿ ಕೊಟ್ಟಿದ್ದೇವೆ. ನನ್ನ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವಾ ಆಸ್ತಿ ಹಾನಗಲ್ -ಬಂಕಾಪುರ ರಸ್ತೆಯ ಮೇಲೆ ಮಲ್ಲಿಗಾರ ಗ್ರಾಮದಲ್ಲಿ ಇದೆ.

7 ರಿಂದ 19 ನೇ ಪ್ರತಿವಾದಿಯ ಪರ ವಕೀಲರು 1 ರಿಂದ 5 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

<u>: ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ ಹಾನಗಲ್